ಇವನ ಮಾತಿನಲ್ಲಿ ಧ್ವನಿಸುವ ಕೆಣಕನ್ನು, ಕಿಂಡಲನ್ನು ಸುಲಭವಾಗಿ ಬದಿಗೆ ಸರಿಸಲಾಗಲಿಲ್ಲ. ಹೀಗೆ ಹಿಂದುಮುಂದು ತಿಳಿಯದವನನ್ನು ಕಾರಿನಲ್ಲಿ ಹತ್ತಿಸಿಕೊಂಡು ಹೋಗುವ ನನ್ನ ಬಗ್ಗೆ ಇವನು ಏನಂದುಕೊಂಡಾನು? ಆದರೆ, ಅವನ ಬಗ್ಗೆ ಕೆಟ್ಟದಾಗಿ ಅಂದುಕೊಳ್ಳಲು ಮನಸ್ಸು ನಿರಾಕರಿಸುತ್ತಿದೆಯಲ್ಲಾ, ಯಾಕೆ? ಮೆದುಳು ಕೇಳುವ ನ್ಯಾಯಯುತ ಪ್ರಶ್ನೆಗಳಿಗೆ ಉತ್ತರ ಹೇಳದೇ, ಸೋಗು ಹಾಕುತ್ತಿದ್ದ ಮನಸ್ಸಿನೊಳಗೆ ಒಂದು ಪ್ರಳಯವೇ ನಡೆಯುತ್ತಿತ್ತು.

"ನನಗೆ ನಿಮ್ಮ ಬಗ್ಗೆ ಏನೂ ತಿಳೀದೂ ರೀ" ಎಂದ ಹೊರಗೆ ತಮಾಷೆ ನೋಡುತ್ತ.

"ಅಯ್ಯೋ ಹೇಗೆ ಹೀಗೆ ಮೈಂಡ್ ರೀಡಿಂಗ್ ಮಾಡ್ತೀದ್ದೀರಾ?" ಆಶ್ಚರ್ಯದಿಂದ ಕೇಳಿದೆ.

"ಗೊತ್ತಿಲ್ಲಾ ರೀ, ತನ್ನಷ್ಟಕ್ಕೆ ಬರುತ್ತೆ."

ಈ ಮುಗ್ಧವಾದ ಉತ್ತರವನ್ನು ನಿರೀಕ್ಷಿಸಿರಲಿಲ್ಲ. 'ಮತ್ತೊಬ್ಬರ ಮನಸ್ಸನ್ನು ಓದುವುದು ಹೇಗೆ?' ಎಂದು ಒಂದು ಸಣ್ಣ ಲೆಕ್ಚರನ್ನು ಅಪೇಕ್ಷಿಸಿ ಮೋಸ ಹೋದೆ.

"ಓಕೇ..."

"ತುಂಬಾ ಯೋಚನೆ ಮಾಡಬೇಡ್ರೀ. ಬಹಳ ಸಿಂಪಲ್. ಈ ನಿಮಿಷ ಚೆನ್ನಾಗಿರಬೇಕು, ಲಿವ್ ದಿಸ್ ಮೊಮೆಂಟ್."

"ಅದೇ ನಿಮ್ಮ ಬದುಕಿನ ತಾರಕ ಮಂತ್ರವೇ?" ಎಂದು ಕೇಳಿದಾಗ, "ಹಾಗೆ ಹೇಳಿಕೊಳ್ಳಬಹುದು. ಸಂತೋಷವಾದ ಗಳಿಗೆಗಳನ್ನು ಮುಂದುವರೆಸಲು ಕಲಿಯಬೇಕು. ಅಷ್ಟೇ ಮೇಟ್ಟರ್..." ಎಂದವನನ್ನು ನೋಡಿ, "ಮ್. ಭಯ ಹೋಯ್ತೆ?..." ಎಂದು ಕೇಳಿದೆ.

"ಆಲ್‌ಮೋಸ್ಟ್. ಚೆನ್ನಾಗಿಯೇ ಗಾಡಿ ಓಡಿಸ್ತೀರಾ."

"ಥ್ಯಾಂಕ್ ಯೂ. ಮಧ್ಯಾಹ್ನ ಕಾಣಿಸ್ಲಿಲ್ಲವಲ್ಲಾ, ಆಗಲೇ ಹೊರಟು ಹೋದ್ರೀ ಅಂದ್ಕೊಂಡೆ" ಎಂದೆ, ಗೇರ್ ಬದಲಾಯಿಸುತ್ತಾ.

"ಕಾಫೀ ಶಾಪ್‌ವರೆಗೆ ಬಂದು ಹುಡುಕಿದಿರಲ್ಲ!..." ಎಂದು ಅವನು ತಕ್ಷಣ ಹೇಳಿದಾಗ, 'ನಾನು ಹುಡುಕಿದ್ದನ್ನು ನೋಡಿದನೇ? ನನ್ನ ಬಗ್ಗೆ ಏನಂದುಕೊಂಡಿರುತ್ತಾನೆ?' ಎಂದು ಯೋಚಿಸಿದೆ, "ನನ್ನನ್ನ ನೋಡಿದ್ರಾ?" ಎಂದು ಕೇಳಿದೆ.

"ಆಕ್ಚುಯಲಿ, ನನ್ನ ಬಾಸ್ ಜತೆ ಮಾತಾಡ್ತಾ ಇದ್ದೆ. ನನ್ನನ್ನೇ ಹುಡುಕ್ತಾ ಇದ್ರೀಂತ ಗೊತ್ತು. ಮಧ್ಯೆ ಕಟ್ ಮಾಡಿ ಬರಲಿಕ್ಕೆ ಆಗಲಿಲ್ಲ. ಸಾರಿ..." ಎಂದು ನಕ್ಕ.

"ದಟ್ಸ್ ಓಕೇ!"

"ಯಾತಕ್ಕೆ ಹುಡುಕಿದ್ರೀ?"

"ಲಂಚಿಗೆ ಕರ್ಕೊಂಡ್ ಹೋಗೋಣಾಂತ" ನಾನೂ ನಕ್ಕೆ.

"ನಿಜವಾಗ್ಲೂ? ಕಂಪನಿಗೆ ಧಿಕ್ಕಾರ. ಸೆಮಿನಾರಿಗೆ ಧಿಕ್ಕಾರ. ಬಾಸಿಗೆ ಧಿಕ್ಕಾರ. ಏ ಅಮೆರಿಕಾ ಏಕಾಧಿಪತ್ಯವೇ..."

"ಆಹಾ ಹಾ... ಕಾಫಿಗೆ ದುಡ್ಡು ಕೊಡುವುದಕ್ಕೆ" ಎಂದು ನಾನು ಹೇಳಿದಾಗ, "ಸರಿ ನಂಬ್ತೀನಿ..." ಎಂದ ಮುಗ್ಧವಾಗಿ.

"ಹಾಗಾದ್ರೆ ನಂಬಲಿಲ್ಲವಾ?"

"ನಿಜ ಹೇಳಿದ್ರೆ ಕಾರಿಂದ ಇಳಿಸಿಬಿಡ್ತೀರಾ?"

"ಹಾಗೆ ಮಾಡಿದ್ರೂ ಮಾಡಿದ್ನೇ!..."

'ಹೇಗೆ ಹೀಗೆ ನಾನ್ ಸ್ಟಾಪ್ ಆಗಿ ಮಾತಾಡ್ತಾನೆ?' ಯಾರೊಂದಿಗೂ ಹೀಗೆ ಮಾತಿಗೆ ಮಾತು